

ಭಜನೆಯಲ್ಲಿ ದಿನಗಳನ್ನು ಕಳೆಯಲು ಆರಂಭಿಸಿದಳು.

ಆದರೆ, ವೃಂದಾವನಕ್ಕೆ ಹೋಗಿ ಕೃಷ್ಣನ ಸನ್ನಿಧಿಯಲ್ಲಿಯೇ ಸದಾ ಇರುವ ಆಸೆಯನ್ನು ಅವಳಿಗೆ ಹತ್ತಿಕ್ಕಲು ಸಾಧ್ಯವಾಗಲಿಲ್ಲ. ವಿಠಲ್‌ನಾಥ್ ಜಿ ಅವರ ಸಲಹೆಯಂತೆ ತನ್ನ ಪತಿಗೆ ತುಂಬಾ ವಿಧೇಯಳಾಗಿ, ಅವನು ಹೇಳಿದ್ದೆಲ್ಲವನ್ನೂ ಮಾಡುತ್ತಾ ಇದ್ದು, ಕೊನೆಗೆ ಅವನನ್ನು ಮೆಚ್ಚಿಸಿ, ವೃಂದಾವನಕ್ಕೆ ಹೋಗಲು ಅವನ ಅನುಮತಿಯನ್ನು ಪಡೆದಳು. ನಂತರ ವಿಠಲ್‌ನಾಥ್ ಜಿ ಅವರಿಂದ ವೈಷ್ಣವ ದೀಕ್ಷೆಯನ್ನು ಪಡೆದು, ಬೃಂದಾವನದಲ್ಲಿ ತಾಜ್ ಕೃಷ್ಣನನ್ನು ಸದಾ ಧ್ಯಾನಿಸುತ್ತಾ ಇರುತ್ತಾಳೆ. ಒಮ್ಮೆ, ಕೃಷ್ಣನ ಧ್ಯಾನ ಮಾಡುತ್ತಿರುವಾಗ ಅವಳಿಗೆ ಹೇಳಲಾಗದ ಸಂಕಟ ಶುರುವಾಗಿ, ಅನ್ನಾಹಾರಗಳನ್ನೂ ತೊರೆಯುವಂತಾಗುತ್ತದೆ. ಆ ಸ್ಥಿತಿಯಲ್ಲಿಯೇ ಅವಳಿಗೆ ದೇಹದ ಮೇಲಿನ ಹತೋಟಿಯೂ ತಪ್ಪಿ ಒಂದು ಬಗೆಯ ಮೂರ್ಛಾವಸ್ಥೆಗೆ ಹೋಗುತ್ತಾಳೆ; ಆಗ, ಆ ಸ್ಥಿತಿಯಲ್ಲಿ ಅವಳಿಗೆ ಹೋಳಿ ಆಡುತ್ತಿರುವ ಕೃಷ್ಣನ ದರ್ಶನವಾಗುತ್ತದೆ. ಆ ಶಬ್ದಾತೀತ ಅನುಭವವನ್ನು ಅವಳು ನಂತರ 'ಸಾಧೆಬರಾ ಧಮಾರ್' ಎಂಬ ಗೀತೆಯಲ್ಲಿ ವರ್ಣಿಸುತ್ತಾಳೆ. ಒಂದು ಕಾಲಘಟ್ಟದಲ್ಲಿ ಈ ಗೀತೆ ತುಂಬಾ ಜನಪ್ರಿಯವಾಗಿತ್ತೆಂದು ವಿದ್ವಾಂಸರು ಹೇಳುತ್ತಾರೆ. ಕೊನೆಗಾಲದಲ್ಲಿ ಆಗ್ರಾದಲ್ಲಿಯೇ 'ಗೋಕುಲಪುರ'ವನ್ನು ನಿರ್ಮಿಸಿ, ಅಲ್ಲಿಯೇ ಅಸು ನೀಗುತ್ತಾಳೆ.

ತಾಜ್ ಬೀಬಿ ವೈಷ್ಣವ ದೀಕ್ಷೆಯನ್ನು ಪಡೆದ ನಂತರ ಆ ಪರಂಪರೆಯ ಅನೇಕ ಕೃತಿಗಳನ್ನು ರಚಿಸಿದಳು: ಅವುಗಳಲ್ಲಿ ಮುಖ್ಯವಾದವುಗಳೆಂದರೆ ಗಣೇಶ ಸ್ತುತಿ, ಸರಸ್ವತಿ ಸಮಾರಾಧನ, ದಶಾವತಾರ್ ವರ್ಣನ್, ಭವಾನಿ ವಂದನಾ, ಹೋರೀ ಫಾಗ್, ಇತ್ಯಾದಿ. ಅವಳ ಬಿಡಿ ಗೀತೆಗಳಲ್ಲಿ ಅಭಿವ್ಯಕ್ತವಾಗುವ ಆರ್ತತೆ ಹಾಗೂ ಭಕ್ತಿ ಹೃದಯಸ್ಪರ್ಶಿಯಾಗಿವೆ. 'ಪುಷ್ಟಿ ಮಾರ್ಗ ಸಂಪ್ರದಾಯ'ದ ಅತ್ಯಂತ ಮಹತ್ವದ ಸಂತಳೆಂದು ತಾಜ್ ಪರಿಗಣಿಸಲ್ಪಟ್ಟಿದ್ದಾಳೆ. ಅವಳ ಭಾಷೆಯ ಸೊಗಸನ್ನು ನಿದರ್ಶಿಸಲು ಮೊದಲ ಗೀತೆಯನ್ನು ಮೂಲ ಭಾಷೆಯಲ್ಲಿ ಕೊಟ್ಟು ಅನುವಾದಿಸಿದ್ದೇನೆ; ಉಳಿದ ಒಂದೆರಡು ಗೀತೆಗಳ ಅನುವಾದವನ್ನು ಮಾತ್ರ ಕೊಟ್ಟಿದ್ದೇನೆ.

### 1. ಸುನೋ ದಿಲ್ ಜಾನೀ, ಮೇರೆ ದಿಲ್ ಕಿ ಕಹಾನಿ ತುಮ್;

ಹುಸ್ನ್ ಕಿ ಬಿಕಾನಿ, ಬದ್ನಾಮೀ ಭಿ ಸಹೂಂಗಿ ಮೈ (1)
ದೇವ್ ಪೂಜಾ ಠಾನೀ, ಮೈ ನಮಾಜ್ ಹೂ ಭುಲಾನೀ,
ತಜೆ ಕಲಮಾ ಕುರಾನ್; ತೇರೇ ಗುನನ್ ಗಾವೂಂಗೀ ಮೈ (2)
ಸಾವರಾ ಸಲೌನಾ ಸರ್‌ತಾಜ್ ಸರ್ ಕೂಲ್ಹೇ ದಾರ್;
ತೇರೆ ನೇಹ್ ದಾಗ್ ಮೆ ನಿದಾಗ್ ಹೈ ರಹೂಂಗೀ ಮೈ (3)
ನಂದ್ ಕೆ ಕುಮಾರ್ ಕುರ್ಬಾನ್ ಠಾಣೀ ಸೂರತ್ ಪೈ,
ಹೋ ತೋ ಮುಗಲಾನೀ ಹಿಂದುವಾನೀ ಹೈ ರಹೂಂಗೀ ಮೈ. (4)